


ಗುಂಡ: ಲೇ ನಿನ್ನ ಹುಟ್ಟು ಹಬ್ಬಕ್ಕೆ ಸೀರೆ ತರಲಾ ಅಥವಾ ಚೂಡಿದಾರ ತಗೊಂಡು ಬರಲಾ?
ಹೆಂಡತಿ: ನಿಮಗೆ ಬಟ್ಟೆ ಒಗೆಯೋದಕ್ಕೆ ಯಾವುದು ಸುಲಭ ಆಗುತ್ತೋ ಅದನ್ನೇ ತನ್ನಿ.

★★★

ಗುಂಡ: ನಾನು ಸ್ನಾನ ಮಾಡ್ತಿದ್ದಾಗ ನನ್ನ ಮೊಬೈಲ್ ರಿಂಗ್ ಆಯಿತಲ್ಲ ಎಲ್ಲಿ?
ಹೆಂಡತಿ: ಇಲ್ಲಿದೆ ತಗೊಳ್ಳಿ.
ಗುಂಡ: ಇದೇನಿದು ಮೊಬೈಲ್ ಕತ್ತರಿಸಿದ್ದೀಯಲ್ಲ ಯಾಕೆ?
ಹೆಂಡತಿ: ನೀವೇ ಹೇಳಿದ್ರಲ್ಲ ಮೊಬೈಲ್ ಕಟ್ ಮಾಡಿಡು ಆಮೇಲೆ ನೋಡ್ತೀನಿಂತ, ಅದಕ್ಕೆ ಕಟ್ ಮಾಡ್ದೆ.

★★★

ರಂಗಮ್ಮ: ಕಾಮಿನಿ ನಿನ್ನ ಮದುವೆ ಆಯ್ತಾ?
ಕಾಮಿನಿ: ಹೂಂ ಆಯ್ತು ಆಂಟಿ.
ರಂಗಮ್ಮ: ಹುಡುಗ ಏನ್ಮಾಡ್ಕೊಂಡಿದಾನೆ?
ಕಾಮಿನಿ: ಬೇಜಾರು ಮಾಡ್ಕೊಂಡಿದಾನೆ.

★★★

ಸಿನಿಮಾ ನಟ: ಪ್ರಿಯೆ ಸಾಯೋದಕ್ಕೆ ಹೊರಟವಳು ಯಾಕೆ ಮೇಕಪ್ ಮಾಡ್ಕೋತಾ ಇದ್ದೀಯಾ?
ನಟಿ: ನಿಮಗೆ ಗೊತ್ತಲ್ಲ! ಸತ್ತ ಮೇಲೆ ಟಿವಿಯವರು ಬರ್ತಾರಲ್ಲ!

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

ಗರ್ಲ್ ಫ್ರೆಂಡ್: ಮದುವೆಯ ನಂತರ ನಾನು ನಿಮ್ಮ ಎಲ್ಲಾ ದುಃಖಗಳನ್ನು ಹಂಚಿಕೊಳ್ಳುತ್ತೇನೆ.
ಗುಂಡ: ಆದರೆ.... ನಾನೆಲ್ಲಿ ದುಃಖಿಯಾಗಿದ್ದೇನೆ?
ಗರ್ಲ್ ಫ್ರೇಂಡ್: ನಾನು ಹೇಳಿದ್ದು ಮದುವೆಯ ನಂತರವೆಂದು...!

★★★

ವ್ಯಾಯಾಮ ಮಾಡುವುದರಿಂದ ಆಯುಷ್ಯ ವೃದ್ಧಿಯಾಗುವುದೇನೋ ನಿಜ. ಆದರೆ ನೆನಪಿಡತಕ್ಕ ವಿಷಯವೆಂದರೆ
ವೃದ್ಧಿಯಾಗುವುದು ವೃದ್ಧಾಪ್ಯದ ದಿನಗಳೇ ವಿನಃ ತಾರುಣ್ಯದ್ದಲ್ಲ...!

★★★

ಬರಲಿರುವ ಹೊಸ ಕಾನೂನೊಂದರ ಪ್ರಕಾರ ಯಾರ ಮೊಬೈಲಿನ ಕ್ಯಾಮೆರಾ 2 ಮೆಗಾ ಪಿಕ್ಸೆಲ್‌ಗಿಂತ ಕಡಿಮೆಯದ್ದಿರುತ್ತದೋ ಅವರನ್ನು ದಾರಿದ್ರ್ಯ ರೇಖೆಗಿಂತ ಕೆಳಗಿರುವವರೆಂದು ಪರಿಗಣಿಸಲಾಗುವುದು!

★★★

ಪತ್ನಿ: ಅಯ್ಯೋ ದೇವರೇ, ನಿಮ್ಮ ತಲೆಯಲ್ಲಿ ರಕ್ತ ಸುರಿಯುತ್ತಿದೆಯಲ್ರೀ, ಏನಾಯ್ತು?
ಪತ್ನಿ: ಸ್ನೇಹಿತನೋರ್ವ ಅವನ ಕೈಯಲ್ಲಿದ್ದ ಇಟ್ಟಿಗೆಯಲ್ಲಿ ಹೊಡೆದುಬಿಟ್ಟ ಕಣೆ.
ಪತ್ನಿ: ಯಾಕೆ, ನೀವೂ ಹೊಡೆಯಬೇಕಿತ್ತು; ನಿಮ್ಮ ಕೈಯಲ್ಲಿ ಏನೂ ಇರಲಿಲ್ಲವೆ?
ಪತಿ: ನನ್ನ ಕೈಯಲ್ಲಿ ಅವನ ಹೆಂಡತಿಯ ಕೈಯಿತ್ತು...!

★★★




ಹೊಸ ಪರಿಯ ಮೌನಾಚರಣೆ...
ಗತಿಸಿ ಹೋದ ಮಾನ್ಯ ಗುಂಡಪ್ಪನವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುತ್ತಾ ನಾವೆಲ್ಲರೂ ಎರಡು ನಿಮಿಷ ನಮ್ಮ ಮೊಬೈಲ್‌ಗಳನ್ನು ಸೈಲೆಂಟ್ ಮೋಡ್‌ನಲ್ಲಿ ಇಡೋಣ!

★★★

ರಾಮು: ಅಲ್ಲ ಕಣಯ್ಯಾ, ನಿನ್ನ ಹೆಂಡತಿ ಸತ್ತುಹೋದಳೂಂತ ನಾದಿನಿಯನ್ನೇ ಯಾಕೆ ಮದುವೆಯಾದೆ?
ಗುಂಡ: ಹೊಸ ಅತ್ತೆಯ ಜೊತೆ ಏಗುವಷ್ಟು ಧೈರ್ಯ ಈಗ ಇಲ್ಲ ಕಣಯ್ಯಾ, ಅದಕ್ಕೇ...!

★★★

ಪುಣ್ಯ ಕ್ಷೇತ್ರದಲ್ಲಿ ಗುಂಡನಿಗೆ ಸ್ವಾಮೀಜಿಯೋರ್ವರ ದರ್ಶನವಾಯಿತು..
ಗುಂಡ: ಪ್ರಣಾಮ ಸ್ವಾಮೀಜಿ, ನೀವು ಹೇಗಿರುವಿರಿ?
ಸ್ವಾಮೀಜಿ: ನಾವೇನೋ ಸಾಧು ಸಂತರು, ನಮ್ಮ ರಾಮ ಹೇಗೆ ಇಡುತ್ತಾನೋ ಹಾಗೆ ಇರುತ್ತೇವೆ. ಇರಲಿ, ನೀನು ಹೇಗಿರುವೆ ಮಗೂ?
ಗುಂಡ: ನಾವಂತೂ ಸಂಸಾರಸ್ಥರು, ನಮ್ಮ ಸೀತೆ ಹೇಗೆ ಇಡುತ್ತಾಳೋ ಹಾಗೆ ಇರುತ್ತೇವೆ ಸ್ವಾಮೀಜಿ!

★★★

ಗುಂಡ: ನನಗೆ ಕೊಳೆತ ಸೇಬು ಹಣ್ಣುಗಳನ್ನು ಕೊಡು.
ಅಂಗಡಿಯಾತ: ಕೊಳೆತದ್ದು?
ಗುಂಡ: ಹೌದು, ಕೊಳೆತು ಹಾಳಾದದ್ದು.
ಅಂಗಡಿಯಾತ: ಕೊಳೆತ ಹಣ್ಣುಗಳನ್ನೆಲ್ಲಾ ಆಯ್ದು ಗುಂಡನಿಗಿತ್ತ.
ಗುಂಡ: (ಅದನ್ನು ಅಂಗಡಿಯಾತನಿಗೆ ಹಿಂತಿರುಗಿಸುತ್ತಾ) ಸರಿ, ಇದನ್ನೀಗ ಬದಿಗಿಟ್ಟು ಉಳಿದ ಒಳ್ಳೆಯ ಹಣ್ಣುಗಳ ರಾಶಿಯಿಂದ ಒಂದು ಕೆಜಿ ತೂಗಿ ನನಗೆ ಕೊಡು!

★★★

ಟೀಚರ್: ಇಂಗ್ಲಿಷ್ ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳಿವೆ?
ಗುಂಡ: ಜಿ.ಎಸ್.ಟಿ. ರಹಿತ 23 ಮತ್ತು ಜಿ.ಎಸ್.ಟಿ. ಸಹಿತ 26 ಟೀಚರ್!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**